(ಈ) ಯಳಂದೂರು ಬಿ.ಆರ್.ಹಿಲ್ಸ್ ರಸ್ತೆ ಸರಪಳಿ 0.00 ರಿಂದ 26.50 ಕಿಮೀ ವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ.

5239(5957) ಶ್ರೀ ಬಾಲರಾಜ್ ಎಸ್. (ಕೊಳ್ಳೆಗಾಲ) ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಯಳಂದೂರು ತಾಲ್ಲೂಕು ಬಿಳಿಗಿರಿ ರಂಗನ ಬೆಟ್ಟದಲ್ಲಿ ಯಾತ್ರಿ ನಿವಾಸ ನಿರ್ಮಿಸಲು ಬಿಡುಗಡೆಯಾದ ಹಣ ಎಷ್ಟು;

ಆ) ಕಂದಾಯ ಇಲಾಖೆಯ ಜಾಗ ನೀಡಲು ಒಪ್ಪಿಗೆ ನೀಡಿದ್ದರೂ ಸಹ ವಿಳಂಬಕ್ಕೆ ಕಾರಣವೇನು;

ಇ) ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸೋಮರಸನ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಕೇಂದ್ರವನ್ನಾಗಿಸಲು ಸರ್ಕಾರದ ತೀರ್ಮಾನವೇನು;

ಈ) ಪ್ರಸಿದ್ಧ ದೊಡ್ಡ ಸಂಪಿಗೆ (ಬಿಳಿಗಿರಿ ರಂಗನಬೆಟ್ಟ) ಸ್ಥಳವನ್ನು ಅಭಿವೃದ್ಧಿಪಡಿಸಿ ಅಲ್ಲಿನ ಇತಿಹಾಸವನ್ನು ತಿಳಿಸಿ ಸಫಾರಿ ಏರ್ಪಡಿಸಿದ್ದರೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕವಾಗುವುದೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ :

ಉ) ಬಿಳಿಗಿರಿರಂಗಸ್ವಾಮಿ ದೇವಸ್ಥಾನಕ್ಕೆ ರಾಜ ಗೋಪುರ ನಿರ್ಮಿಸಿ ದೇವಸ್ಥಾನದ ಸಮಗ್ರ ಅಬಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು;

ಊ) ಹಾಗಿದ್ದಲ್ಲಿ, ಎಷ್ಟು ಕಾಲಾವದಿಯೊಳಗೆ ಈ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು;

ಶ್ರೀ ಡಿ.ಟಿ.ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಬಿಳಿಗಿರಿರಂಗನ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಿಸಲು ಕೇಂದ್ರ ಸರ್ಕಾರವು 44.80ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತದೆ.

ಆ) ಧಾರ್ಮಿಕ ದತ್ತಿ ಇಲಾಖೆಯು ಓದಗಿಸಿದ ಜಮೀನು ಭಾರಿ ಹಳ್ಳದಿಂದ ಕೂಡಿದ್ದರಿಂದ ಸದರಿ ಜಮೀನು ಯಾತ್ರಿನಿವಾಸ ನಿರ್ಮಿಸಲು ಯೋಗ್ಯವಲ್ಲವೆಂದು ತೀರ್ಮಾನಿಸಿ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಯಾತ್ರಿನಿವಾಸದ ಯೋಜನೆಯನ್ನು ಬೇರೆಡೆಗೆ ವರ್ಗಾಯಿಸಲಾಗಿದೆ.

ಇ) ಸೋಮರಸನ ಕೆರೆ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಬಿಳಿಗಿರಿರಂಗನಬೆಟ್ಟದ ಬಳಿ ಇರುವ ಕ್ಯಾತದೇವರ ಗುಡಿಯಲ್ಲಿ ಮೆ: ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆ ಟೆಂಟ್‌ಗಳನ್ನು ನಿರ್ಮಿಸಿ ಪ್ರವಾಸಿಗರ ಅನುಕೂಲಕ್ಕಾಗಿ ಸಾಹಸಿ ಚಾರಣ ಮತ್ತು ವನ್ಯಜೀವಿ ಸಫಾರಿ ಏರ್ಪಡಿಸುತ್ತದೆ.

ಉ) ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನದ ವತಿಯಿಂದ ಸುಮಾರು 45 ಲಕ್ಷ ಅಂದಾಜು ವೆಚ್ಚದಲ್ಲಿ ರಾಜಗೋಪುರ ನಿರ್ಮಿಸಲು ಉದ್ದೇಶಿಸಿದ್ದು, ಈ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ರೂ. 3.00 ಲಕ್ಷ ವಂತಿಗೆ ಸಂಗ್ರಹಿಸಲಾಗಿರುತ್ತದೆ. ಇದಲ್ಲದೆ, ರಾಜಗೋಪುರ ನಿರ್ಮಿಸಲು ನಕ್ಷೆ ಮತ್ತು ಅಂದಾಜುಪಟ್ಟಿ ತಯಾರಿಸಿ ಲೋಕೋಪಯೋಗಿ ಇಲಾಖಾ ವತಿಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿ, ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸುವಂತೆ ಧಾರ್ಮಿಕ ದತ್ತಿ ಆಯುಕ್ತರು ದಿನಾಂಕ : 07–07–2005ರಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿಗೆ ತಿಳಿಸಿದ್ದಾರೆ.

ಖು) ಕಾಮಗಾರಿಗೆ ರೂ. 45.00 ಲಕ್ಷದಿಂದ ರೂ. 50.00 ಲಕ್ಷದ ಮೊತ್ತ ಅಗತ್ಯವಿದ್ದು, ಅದರಲ್ಲಿ ಪ್ರಸ್ತುತ ರೂ.3.00 ಲಕ್ಷ ಮಾತ್ರ ಸಂಗ್ರಹವಾಗಿದೆ ಉಳಿಕೆ ಮೊತ್ತ ಕ್ರೋಢೀಕರಿಸಿಕೊಂಡು ನಂತರ ಕಾಮಗಾರಿ ಕೈಗೊಳ್ಳಲು ಚಾಲನೆ ನೀಡಲಾಗುವುದು ;

5241(6166) ಶ್ರೀ ಭೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಪರಿಸರ ಅರಣ್ಯ ಅಭಿವೃದ್ಧಿ ಸಮಿತಿಗಳನ್ನು (ಇ.ಡಿ.ಸಿ) ರಚಿಸಲಾಗಿದೆ :

ಆ) ಈ ಸಮಿತಿಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು ಹಾಗೂ ಈ ಹಣದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಇ) ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ? (ವಿವರ ನೀಡುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಗ್ರಾಮಗಳಲ್ಲಿ ರಚಿಸಲಾಗಿರುವ ಪರಿಸರ ಅಭಿವೃದ್ಧಿ ಸಮಿತಿಗಳ (ಈಡಿಸಿ)ಪಂಚಾಯ್ತಿವಾರು ಹಾಗೂ ಗ್ರಾಮವಾರು ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಪರಿಸರ ಅಭಿವೃದ್ಧಿ ಸಮಿತಿಗಳಿಗೆ (ಈಡಿಸಿ) ಬಿಡುಗಡೆ ಮಾಡಿರುವ ಹಣ ಹಾಗೂ ತೆಗೆದುಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

ಇ) ಒಟ್ಟು 1184.53 ಹೆಕ್ಟೇರ್‌ನಷ್ಟು ನೆಡುತೋಪು ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿದೆ ಮತ್ತು ಪ್ರಾರಂಭಿಕ ಹಂತದ ಚಟುವಟಿಕೆಗಳಲ್ಲಿ (Entry point Activities) 88 ಕಾಮಗಾರಿಗಳು ಪೂರ್ಣಗೊಂಡಿವೆ.

ಅನುಬಂಧ–1

ವಿಧಾನಸಭಾ ಸದಸ್ಯರಾದ ಶ್ರೀ ಕೆ.ಜಿ. ಭೋಪಯ್ಯ (ಮಡಿಕೇರಿ) ಇವರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 6166

ಉತ್ತರಿಸುವ ದಿನಾಂಕ: 23–7–2005

	ವಿಭಾಗದ ಹೆಸರು	ಪಂಚಾಯ್ತಿ ಹೆಸರು	ಪರಿಸರ ಅರಣ್ಯ ಅಭಿವೃದ್ಧಿ ಸಮಿತಿ (ಈಡಿಸಿ) ಹೆಸರು
1	ಹುಣಸೂರು ವನ್ಯಜೀವಿ	ಬ್ಯಾಡಗಿ	ನಾಣಚ್ಚಿ
		ನಾಲ್ಕೇರಿ	ಲಕ್ಕುಂದ
		ಬಾಡಗಿ	ಬಾಡಗಿ
		ನಾಲ್ಕೇರಿ	ನಾಲ್ಕೇರಿ
		ಕಾನೂರು	ಕಾನೂರು
		ನಿಟ್ಟೂರು	ಕಾರ್ಮಾಡು
		ಬಾಳೆಲೆ	ಸೂಳುಗೋಡು
		ತಿತಿಮತಿ	ಮರೂರು
		ಒಟ್ಟು	8